# ಎಲಿಗೆಂಟ್- ಗ್ಲಾಮರ್ ಡಿಸೈನ್ ಮೋಡಿ



**ಉಡುಪು ವಿನ್ಯಾಸದಲ್ಲಿ ಸಮಕಾಲೀನ ಟ್ರೆಂಡ್ ಬಳಸಿ 'ಸಖಿ ಕಲೆಕ್ಷನ್' ತರಾವರಿ ವಿನ್ಯಾಸದ ಸೀರೆ ಹಾಗೂ ಸಲ್ವಾರ್ ಕಮೀಜ್ ಅನ್ನು ಹೊರತಂದಿದೆ. ಇದು ಮದರ್ಸ್ ಡೇ ಕೊಡುಗೆ.**




'ಸಖಿ ಕಲೆಕ್ಷನ್'ನ ನೀತಾ-ಚಂದ್ರಾ

ಈಗಿನ ಮಹಿಳೆಯರಲ್ಲಿ ಸೀರೆ, ಡ್ರೆಸ್ ಸೆನ್ಸ್ ಬದಲಾಗಿದೆ. ರೇಷ್ಮೆ ಸೀರೆ ಉಟ್ಟರೂ ಬರೀ ಜರಿ, ಬುಟ್ಟ ಇದ್ದರೆ ಸಾಲದು. ಕುಸುರಿ ಕೆಲಸ, ಕಸೂತಿ ಬಳಸಿದ ಉಡುಪು ಫ್ಯಾಷನೇಬಲ್ ಆಗಿರಬೇಕು. ಚೆನ್ನಾಗಿಯೂ ಕಾಣಬೇಕು ಎಂಬುದು ಟ್ರೆಂಡ್ ಆಗಿದೆ. ಇಂಥ ಮನೋಭಾವದ ತಾಯಿ-ಮಗಳು ಇಬ್ಬರ ಬಯಕೆಯನ್ನೂ ಪೂರೈಸುವುದಕ್ಕಾಗಿ ಈಗ ಹೊಸ ವಿನ್ಯಾಸದ ಉಡುಪು ಬಂದಿದೆ.

ಉಡುಪು ವಿನ್ಯಾಸದಲ್ಲಿ ಸಮಕಾಲೀನ ಟ್ರೆಂಡ್ ಬಳಸಿ 'ಸಖಿ ಕಲೆಕ್ಷನ್' ಸದ್ಯ ತರಾವರಿ ವಿನ್ಯಾಸದ ಸೀರೆ ಹಾಗೂ ಸಲ್ವಾರ್ ಕಮೀಜ್ ಅನ್ನು ಹೊರತಂದಿದೆ. ಮದರ್ಸ್ ಡೇ ನೆಪದಲ್ಲಿ ತಂದಿರುವ ಈ 'ಮದರ್-ಡಾಟರ್ ಕಲೆಕ್ಷನ್' ಶಿಫಾನ್, ಕಾಂಚೀವರಂ, ಜಾರ್ಜೆಟ್, ಕ್ರೇಪ್, ಬನಾರಸ್ ಮುಂತಾದ ಸೀರೆ ವೆರೈಟಿಗಳಲ್ಲಿ ಸಿಗುತ್ತದೆ.

'ಸಖಿ' ತಾಯಿ- ಮಗಳ ಉಡುಪು ಸಂಗ್ರಹದಲ್ಲಿ ತಾಯಿಗಾಗಿ ಸಮಯಾತೀತ ಸೌಂದರ್ಯ (ಟೈಮ್‌ಲೆಸ್ ಎಲಿಗೆನ್ಸ್) ಮತ್ತು ಶೈಲಿಯಿಂದ ಕೂಡಿದ ಸೀರೆಗಳಿದ್ದು, ಮಗಳಿಗಾಗಿ ಗ್ಲಾಮರ್ ಮತ್ತು ಸಮಕಾಲೀನ ಟ್ರೆಂಡ್‌ಗಳನ್ನು ಅಳವಡಿಸಿದ ಸೀರೆಗಳಿವೆ. ಒಂದೇ ಬಗೆಯ ಬಟ್ಟೆಯಾದರೂ ಫ್ಯಾಬ್ರಿಕ್, ಡಿಸೈನ್ ಮತ್ತು ಬಣ್ಣಗಳಲ್ಲಿ ಪ್ರತ್ಯೇಕತೆ ಇದ್ದು ವಯೋಮಾನಕ್ಕೆ ಅನುಗುಣವಾಗಿ ಡಿಸೈನ್ ಮಾಡಲಾಗಿದೆ. ಶುದ್ಧ ಕೈಮಗ್ಗದ ಬಟ್ಟೆಗೆ ಅಪ್ಪಟ ರೇಷ್ಮೆಜರಿಯನ್ನು ಕಾಂಬಿನೇಷನ್ ಮಾಡಿ ನೇಯ್ದಿರುವ ಎಂಬ್ರಾಯಿಡರಿ ಸೀರೆ ಗಮನ ಸೆಳೆಯುತ್ತದೆ. ನವೀನ ನೆರಿಗೆ, ಸೆರಗಿನ ಡಿಸೈನ್ ಒಳಗೊಂಡ ಸೀರೆ ಶುಭ ಸಮಾರಂಭ, ಪಾರ್ಟಿ ವೇರ್‌ಗಳಿಗೂ ಸೂಕ್ತವಾಗಿದೆ.

ಫ್ಯಾನ್ಸಿ ಸೀರೆ, ಸಾಂಪ್ರದಾಯಿಕ ಉಡುಗೆ, ಕಸೂತಿ ಸೀರೆ, ಸೂಕ್ಷ್ಮ ಕರಕುಶಲತೆ, ನಿಕ್ಕಿ, ಜರಿ ಬಳಸಿ ಹೊಲಿದ ಸಲ್ವಾರ್ ಕಮೀಜ್, ರೇಷ್ಮೆ, ಜಾರ್ಜೆಟ್, ಕ್ರೇಪ್ ವೆರೈಟಿ ಸೀರೆಗಳು, ಎಲಿಗೆಂಟ್ ಲುಕ್ ಕೊಡುವ ದುಪ್ಪಟ್ಟಾ ಈ ಸಂಗ್ರಹದ ವಿಶೇಷತೆ ಎನ್ನಬಹುದು.

ಈ ತರಾವರಿ ಸೀರೆಗಳ ಅನಾವರಣಕ್ಕಾಗಿ 'ಸಖಿ ಕಲೆಕ್ಷನ್ಸ್' ಬೆಂಗಳೂರಿನ ಇಂದಿರಾನಗರದಲ್ಲಿ ಒಂದು ಫ್ಯಾಷನ್ ಶೋ ಅನ್ನೂ ಏರ್ಪಡಿಸಿತ್ತು. ಮದರ್ಸ್ ಡೇ ಪ್ರಯುಕ್ತ ಏರ್ಪಡಿಸಿರುವ ಈ ಫ್ಯಾಷನ್ ಶೋ ಕೂಡ ವಿಭಿನ್ನವಾಗಿತ್ತು. ಇಲ್ಲಿ ಮಾದಕತೆಗೆ ಬದಲಾಗಿ ಭಾವನಾತ್ಮಕ ಸೂಕ್ಷ್ಮ ಸಂವೇದನೆಗಳಿಗೆ ಆದ್ಯತೆ ಕೊಡಲಾಗಿತ್ತು. ತಾಯಿ-ಮಗಳ ಪ್ರೀತಿಯ ಬೆಸುಗೆ ರ್‍ಯಾಂಪ್ ಮೇಲೆ ಹಾಕಿದ ಜೋಡಿ ಹೆಜ್ಜೆಗಳಲ್ಲಿ ಹೊಸೆದುಕೊಂಡಿತ್ತು.

ಅಮ್ಮಂದಿರು ಕಡು ಬಣ್ಣದ ಕಾಂಚೀವರಂ, ಶಿಫಾನ್ ಸೀರೆಗಳನ್ನುಟ್ಟರೆ ಮಕ್ಕಳು ತಿಳಿ ಬಣ್ಣದ ಆಕರ್ಷಕ ಡಿಸೈನ್ ಉಳ್ಳ ಶಿಫಾನ್ ಮತ್ತು ಜಾರ್ಜೆಟ್‌ನಲ್ಲಿ ಮಿಂಚಿದರು. 'ತಾಯಿ- ಮಗಳ ಸಂಬಂಧ ಅವಿನಾಭಾವವಾದದ್ದು. ಮದರ್ಸ್-ಡಾಟರ್ ಕಲೆಕ್ಷನ್‌ನಲ್ಲಿ ತಾಯಿಗೆ ಎಲಿಗೆಂಟ್ ಲುಕ್ ಮತ್ತು ಮಗಳಿಗೆ ಗ್ಲಾಮರ್ ಲುಕ್ ಕೊಡುವ ಉಡುಪನ್ನು ವಿನ್ಯಾಸ ಮಾಡಿದ್ದೇವೆ' ಎನ್ನುತ್ತಾರೆ ಚಂದ್ರಾ ರಾಜೇಂದ್ರನ್.

■ ಸುಮಾ